Mukka Proteins Limited

ISO 22000 Certified Company

ISO 9001 : 2015 Certified Company

Date: 09-11-2026

National Stock Exchange of India Limited
Exchange Plaza, C-1, Block G
Bandra Kurla Complex,
Bandra East, Mumbai-400051
Scrip Code: MUKKA

BSE Limited
Listing Department
Dalal Street,
Mumbai-400001
Scrip Code: 544135

Dear Sir/Madam,

Subject: Newspaper advertisement pursuant to Regulation 47 of the SEBI (Listing Obligations and Disclosure Requirements) Regulations, 2015.

In compliance with Regulation 47 of the Securities and Exchange Board of India (Listing Obligations and Disclosure Requirements) Regulations, 2015, we are hereby enclosing copies of newspaper advertisements of the unaudited financial results (standalone and consolidated) of the Company for the half year and six months period ended 30th September 2026, published today i.e. Monday, 9th November 2026, in **Business Standard** (English) and **Vijaya Karnataka** (Kannada).

This is for your information and records.

Thanking you,

For **Mukka Proteins Limited**

MEHABOOBSAB MAHMADGOUS CHALYAL

Digitally signed by MEHABOOBSAB MAHMADGOUS CHALYAL
Date: 2026.11.09 12:13:46 +05'30'

Mehaboobsab Mahmadgous Chalyal
Company Secretary & Compliance Officer
Membership No.: A67502

Encl: as above.

Premium K-12 school market moves into investor top class

Realty developers join the roll call as school infra draws long-term capital

AUHONA MUKHERJEE & AKSHAT AYUSH
New Delhi, 8 November



India's premium K-12 (kindergarten to Class 12) education market is attracting growing interest from institutional investors and real estate developers, with school infrastructure emerging as a long-term investment opportunity. Investors are exploring partnerships with established school chains and international education brands, even as the traditional model of developers leasing properties to school-operating trusts remains prevalent.

Vinod Kakumani, CEO of SchoolServe, which operates the school real estate platform SchoolProp, said some investors were exploring a three-tier structure involving separate property, management, and operating entities. "The most popular structure for investors in the K-12 segment is to have a developer that owns the land and building and a trust that runs the operations of the school. However, nowadays a three-tier ownership structure is also emerging, where a property company, a management company, and an operating entity exist together," he said.

Despite the scale of private education, the infrastructure serving the sector remains fragmented and under-invested, creating an opportunity for institutional capital, said Anshuman Magazine, chairman and chief executive officer (CEO) for India, Southeast Asia, the Middle East, and Africa at CBRE.

"This is a long-term asset class. The value comes from getting the catchment right and replicating what works. Investors who treat it like a standard commercial play will struggle. Those who build it as a platform will do well," Magazine said.

He said returns would depend on the quality of operators, location, visibility on admissions, and lease or revenue arrangements.

"We expect developers to partner more with established school operators and international education brands. As these platforms expand across core urban markets and into select Tier-II cities, education real estate could grow into an institutional segment, rather than staying the fragmented, promoter-driven market it largely is today," he added.

Saurabh Arora, founder and CEO of University Living, a global managed marketplace for student accommodation, said investor interest was likely to be selective, particularly in urban catchments where families valued accessibility, facilities, and consistent educational experiences. He cited Stoicap Ventures' announcement in August of plans to raise an education infrastructure fund of up to ₹750 crore, targeting rental-generating K-12 school and student housing assets.

Investor interest is growing amid rising demand for private education infrastructure. A CBRE report published in October estimated that India would require an additional 1-1.5 billion square feet of private education infrastructure by 2034-35, driven by rising enrolment, greater private-sector participation, and growing demand for quality education.

The report also found that land requirements for K-12 schools vary widely by location, curriculum, and campus format. Compact urban K-12 schools could require 0.5-3 acres, compared with 5-10 acres or more for suburban and international day-boarding campuses with extensive sports facilities.

Central Board of Secondary Education (CBSE)-affiliated schools generally require 1,600-6,000 square metres of land, depending on the level of the school and its location, along with prescribed playground facilities, the report said.

Dhirendra Mishra, founder and director of LIFE Educare, which operates the school real estate advisory platform School Xchange, said the separation of property ownership and school operations was an established practice, including among CBSE-affiliated institutions. Typically, developers leased land and buildings to trusts for around 15 years, with provisions to extend the arrangement, he said.

Alongside investor interest, limited availability of suitable land in major cities is influencing how school operators expand. Kakumani said demand for premium schools was particularly strong in Bengaluru, Hyderabad, Pune, and the Delhi-National Capital Region, but the availability of land was increasingly constraining new development.

"For example, with a lack of available land in Mumbai, schools are coming up in Navi Mumbai, Thane, etc., to meet the demand. On our portal, we see that the demand for such schools is increasing, but supply is not enough, with very little land for further construction of schools and buildings," Kakumani said. He added that international education groups were also scouting for existing schools whose operations they could take over in locations where there was little scope for fresh construction.

Mishra said demand for premium schooling was spreading beyond Tier-I cities into Tier-II and Tier-III markets. "However, developers want to set up schools in Tier-I areas more because that is where the highest school fees are, and developers find it most profitable," he added.

More on business-standard.com

Realty surge

- Investors explore partnerships with established school chains and international education brands
- Three-tier ownership structure involving property, management and operating entities gains traction
- Land scarcity pushes premium school expansion towards Tier-II cities and suburban markets
- Bengaluru, Hyderabad, Pune, Delhi-NCR see strong demand
- International education groups were also scouting for existing schools whose operations they could take over where there was little scope for new construction
- CBRE report estimates India will need 1-1.5 billion sq ft of additional private education infrastructure by FY35
- The report also found that land requirements for K-12 schools vary widely by location, curriculum, and campus format

Nasa's Swift burns up, highlighting challenges of boosting satellites

WANJIKU CHEBET KANJUMBA
Gainesville, 8 November

Nasa's Neil Gehrels Swift Observatory took its last look at the sky on October 20, 2026, while orbiting about 275 kilometres above Earth.

Nasa ended the telescope's mission three days later, because Swift had sunk so low that drag from the thin air there meant its telescopes couldn't hold steady. The telescope reentered the atmosphere on November 4 above the North Sumatra region of Indonesia and largely burned up, an abrupt ending to two decades spent observing powerful cosmic explosions.

Swift's reentry comes after a failed rescue mission in the summer of 2026. LINK, a commercial robotic spacecraft sent to raise Swift into a safer orbit, reentered Earth's atmosphere in September. The machine designed to save a falling satellite burned up first. As a PhD candidate in aerospace engineering, I know that rescuing satellites is hard. I research how spacecraft approach and capture satellites, including objects that tumble uncontrollably.

Swift's loss points to a new hazard for the young industry that repairs, refuels and moves spacecraft around in orbit. If something goes wrong, the spacecraft doing the rescuing can become another problem.



The special rescue spacecraft LINK, which flew on a failed mission designed to extend the life of Nasa's Neil Gehrels Swift Observatory FILE PHOTO : REUTERS

The rescuer started spinning

The plan was for LINK to approach Swift, grab it with one of its three robotic arms and fire its thrusters to push the telescope back up to about 600 kilometres above Earth's surface, where it could keep observing for years.

In late July, LINK lost two of its three reaction wheels, which are heavy wheels inside a spacecraft that help it turn without using fuel. That loss, combined with problems with its propulsion system, sent the spacecraft into an uncontrolled spin.

Without working wheels, a spacecraft steers with its thrusters instead, and every burn spends propellant.

Engineers eventually slowed LINK's rotation by firing its thrusters against the spin. Nasa reported in August that they had cut its spin from about nine degrees per second to roughly one and a half degrees per second.

Nasa and Katalyst Space, LINK's builder, called off the capture and boost later in August. The team still flew LINK within 12 to 15 kilometres of Swift, where it deployed LINK's three robotic arms and tested its electric thrusters. It never got close enough to grab the telescope.

Fuel is the rescue budget

A servicing spacecraft, like LINK, launches with a finite supply of propellant. Engineers split that fuel supply among the mission's jobs, from reaching the target and approaching it safely to capturing it and moving it to a new orbit. They also pack some extra fuel in case of surprises. Think of a tow truck that burns most of its gas getting itself out of a ditch. Even if it reaches a broken-down car, it may not have enough fuel left to tow it home.

That scenario is close to what happened to LINK. Even after engineers brought its spin under control, Katalyst said the spacecraft no longer had enough propellant to capture Swift and raise its orbit safely. A fuel budget that covers only the planned steps leaves nothing for recovering from a fault. But every extra pound of propellant also makes a spacecraft heavier, and heavier spacecraft cost more to launch and take more fuel to move.

Speed buys time and costs backup

Starting in 2024, solar activity swelled Earth's upper atmosphere, and the extra drag pulled Swift down faster than expected. Once Nasa saw how quickly Swift was falling, the agency had to move fast to try to save the observatory. Space missions typically take years to develop and launch, but in this case, a slow, conventional development programme risked arriving too late. Nasa awarded Katalyst a $30 million contract in September 2025. The company had less than a year to design, build, test and launch LINK. LINK launched on July 3, 2026. Speed comes with trade-offs. In engineering, a compressed schedule can leave less time for repeated testing, building spare hardware and planning recovery options. Public reports do not say whether that trade-off played any part in LINK's faults.

Nasa has said that even though LINK didn't succeed, the effort gave the agency experience in quickly building, launching and operating a servicing spacecraft.

Engineers also showed they could upload new control software to steady a damaged servicing spacecraft with the hardware it had left. And LINK tested its arms and fired all three thrusters at once in orbit.

What comes next

While Swift was the most pressing case for a boost mission, it's not the only one. Nasa's Hubble Space Telescope could one day use a similar boost, and news reports suggested it would have been next in line had this mission worked.

Future missions are pursuing two complementary approaches for rescuing satellites. Astroscale's ELSA-M is built to capture satellites that carry a docking plate installed before launch, which would make it easier for a rescuer to snag and boost them if the satellite eventually got into trouble. The European Space Agency's ClearSpace-1 is planned for 2029 and aims to capture the Proba-1 satellite, which doesn't have a docking plate or anything to help ClearSpace-1 capture it, and remove it from orbit.

LINK's mission showed that a rescue takes more than a robotic arm and enough thrust to reach a target. It also takes a servicer spacecraft that can stay stable, recover from its own faults and keep enough propellant reserved to finish the job. In Swift's case, the rescuer fell short before the rescue could begin.

(The writer is from University of Florida)

THE CONVERSATION

HINGOLI MUNCIPAL COUNCIL, HINGOLI

e-Tender Notice for 2026-27

Hingoli Municipal Council invites e-tender for the work of Proposed construction of shopping Centre at Site No. 100, CTS no.4485,4486 and S.No.94 for Hingoli Municipal Council Hingoli in the State of Maharashtra of Estimated Cost Rs. 410392310.00/-. The e- Tender details are available on **www.mahatenders.gov.in** All relevant dates will be as per the tender published in web portal **www.mahatenders.gov.in**

Date: 06/11/2026

Sd/-
(Pranjali Munde)
Chief Officer
Hingoli Municipal Council

Sd/-
(Rekhatai Bangar)
President
Hingoli Municipal Council

Kolhapur Municipal Corporation
(Health / Solid Waste Management Department)
Public Tender Notice No. 90

This notice is issued to inform all organizations and contractors that the Kolhapur Municipal Corporation is inviting e-tenders for **The Selection of an Operator for Municipal Solid Waste Management (SWM) Services viz., Collection and Transportation of waste from project area to designated depositing centers, ICCC establishment and operations, Mechanized road sweeping with O and M of vehicles, inside Project area of Kolhapur Municipal Corporation**

However, interested bidders should visit the Government of Maharashtra website **www.mahatender.gov.in** from 07/11/2026 to 07/12/2026 at 3:30 PM to receive and submit their tenders.

Sd/-
Commissioner
Kolhapur Municipal Corporation

Mukka Proteins Limited

MUKKA PROTEINS LIMITED
Regd. Office: Mukka Corporate House, Door No. 18-2-16/4, First Cross, NG Road, Attavara, Dakshina Kannada, Mangaluru - 575001, Karnataka.
Tel: +918244252889 Email: investors@mukkaproteins.com
Website: www.mukkaproteins.com CIN: L10207KA2010PLC055771

UNAUDITED STANDALONE AND CONSOLIDATED FINANCIAL RESULTS OF THE COMPANY FOR THE QUARTER AND HALF YEAR ENDED 30TH SEPTEMBER 2026

Based on the recommendation of the Audit Committee, the Board of Directors of the Company at their meeting held on 7th November 2026, have approved the unaudited standalone and consolidated financial results of the Company for the quarter and half year ended 30th September 2026.

The full financial results along with the Limited Review Report of the Statutory Auditors thereon are available on the Company's website at https://mukkaproteins.com/wp-content/uploads/2026/11/Outcome-of-Board-Meeting_Q2_final.pdf and the website of Stock Exchanges i.e. BSE Limited and National Stock Exchange of India Limited at www.bseindia.com and www.nseindia.com, respectively and can also be accessed by scanning the Quick Response ('QR') Code.

For and on behalf of the Board of Directors of
Mukka Proteins Limited
Sd/-
Kalandan Mohammed Haris
Managing Director & CEO

Place : Mangaluru
Date : 07-11-2026

Financial mistakes rarely begin with money. **They begin as unanswered questions.**

From saving and investing to insurance and taxes, PF Guide explores the questions behind everyday financial decisions. Your one-stop guide to understanding personal finance,



one episode at a time.



Business Standard **PFGuide**

Scan the QR code to watch the playlist.

3ನೇ ಅನಧಿಕೃತ ಟೆಸ್ಟ್: ಭಾರತ ಎ ವಿರುದ್ಧ 428 ರನ್ ಹಿನ್ನಡೆಯಲ್ಲಿ ನ್ಯೂಜಿಲೆಂಡ್ ಎ

ತಿಲಕ್ ಸುಂದರ ಪ್ರಸಿದ್ಧ ಆಟಕ್ಕೆ ಕಿವೀಸ್ ತತ್ತರ

ಲಿಂಕನ್(ನ್ಯೂಜಿಲೆಂಡ್): ನ್ಯೂಜಿಲೆಂಡ್ 'ಎ' ವಿರುದ್ಧ ನಡೆಯುತ್ತಿರುವ ಮೂರನೇ ಹಾಗೂ ಅಂತಿಮ ಅನಧಿಕೃತ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ಮುಕ್ತಾಯದ ವೇಳೆಗೆ ಭಾರತ 'ಎ' ತಂಡವು ಸಂಪೂರ್ಣ ಪ್ರಾಬಲ್ಯ ಸಾಧಿಸಿದ್ದು, ಬರೋಬ್ಬರಿ 428 ರನ್‌ಗಳ ಭರ್ಜರಿ ಮುನ್ನಡೆಯನ್ನು ಕಾಯ್ದುಕೊಂಡಿದೆ.

ಭಾನುವಾರ ನಡೆದ ಆಟದಲ್ಲಿ ಭಾರತದ ಬ್ಯಾಟ್ಸ್‌ಮನ್‌ಗಳು ಮತ್ತು ಬೌಲರ್‌ಗಳು ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಪಂದ್ಯದ ಮೇಲೆ ಬಿಗಿ ಹಿಡಿತ ಸಾಧಿಸಿದ್ದಾರೆ. ಮೊದಲ ದಿನ 2 ವಿಕೆಟ್‌ಗೆ 227 ರನ್ ಗಳಿಸಿದ್ದ ಭಾರತ ತಂಡ ಭಾನುವಾರ ಬ್ಯಾಟಿಂಗ್‌ನಲ್ಲಿ ಸಾಂಘಿಕ ಹೋರಾಟ ಪ್ರದರ್ಶಿಸಿತು. 77 ರನ್ ಗಳಿಸಿದ್ದ ಆರಂಭಿಕ ಆಟಗಾರ ಸಾಯಿ ಸುದರ್ಶನ್ 11 ರನ್‌ಗಳನ್ನು ಸೇರಿಸಿ 88 ರನ್ ಗಳಿಸಿದ್ದ ವೇಳೆ ಗಿಬ್ಸನ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಹಾಗಿದ್ದರೂ ನಾಯಕ ಧ್ರುವ್ ಜುರೆಲ್ (71), ತಿಲಕ್ ವರ್ಮಾ (81*) ಮತ್ತು ವಾಷಿಂಗ್ಟನ್ ಸುಂದರ್(50*) ಅದ್ಭುತ ಅರ್ಧಶತಕಗಳನ್ನು ಸಿಡಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು.

ತಿಲಕ್- ಸುಂದರ್ ಜತೆಯಾಟ

ರಿಷಭ್ ಪಂತ್ ಅನುಪಸ್ಥಿತಿಯಿಂದಾಗಿ ಅವಕಾಶ ಪಡೆದಿರುವ ಯುವ ಆಟಗಾರ ತಿಲಕ್ ವರ್ಮಾ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿ ತಮ್ಮ ಸೇರ್ಪಡೆಯನ್ನು ಸಮರ್ಥಿಸಿಕೊಂಡರು. ರವೀಂದ್ರ ಜಡೇಜಾ (25) ಅಲ್ಪ ಕಾಣಿಕೆ ನೀಡಿದರೆ, ತಿಲಕ್ ವರ್ಮಾ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮುರಿಯದ 6ನೇ ವಿಕೆಟ್‌ಗೆ ಅಮೂಲ್ಯವಾದ 114 ರನ್‌ಗಳ ಜೊತೆಯಾಟ ನೀಡಿದರು. ವಾಷಿಂಗ್ಟನ್ ಸುಂದರ್ ಕೂಡ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿ ಅಜೇಯ 50 ರನ್ ಗಳಿಸಿದರು. ಅಂತಿಮವಾಗಿ ಭಾರತ 'ಎ' ತಂಡವು 146 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 464 ರನ್ ಗಳಿಸಿದ್ದ ವೇಳೆ ತನ್ನ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಕಿವೀಸ್‌ಗೆ ಪ್ರಸಿದ್ಧ್ ಆರಂಭಿಕ ಆಘಾತ

ಬೃಹತ್ ಮೊತ್ತದ ಗುರಿಯನ್ನು ಬೆನ್ನಟ್ಟಲು ಕಣಕ್ಕಿಳಿದ ನ್ಯೂಜಿಲೆಂಡ್ 'ಎ' ತಂಡಕ್ಕೆ ಭಾರತದ ವೇಗಿಗಳು ಆರಂಭದಲ್ಲೇ ತೀವ್ರ ಆಘಾತ ನೀಡಿದರು. ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿರುವ ಯುವ ವೇಗದ ಬೌಲರ್ ಪ್ರಸಿದ್ಧ್ ಕೃಷ್ಣ ಅವರು ಮೊನಚಿನ ದಾಳಿ ನಡೆಸಿ ಕಿವೀಸ್ ತಂಡದ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ರೈಸ್ ಮರಿಯು(0) ಮತ್ತು ಕರ್ಟಿಸ್ ಹೇಫಿ(19) ಅವರನ್ನು ಬೇಗನೆ ಪೆವಿಲಿಯನ್‌ಗೆ ಕಳುಹಿಸಿದರು. ಮುಂಬರಲಿರುವ ಟೆಸ್ಟ್ ಸರಣಿಗೆ ಪೂರ್ವಸಿದ್ಧತೆಯ ಭಾಗವಾಗಿ ಈ ಪಂದ್ಯದಲ್ಲಿ ಆಡುತ್ತಿರುವ ಅನುಭವಿ ವೇಗಿ ಜಸ್‌ಪ್ರಿತ್ ಬುಮ್ರಾ ಮತ್ತು ಪ್ರಸಿದ್ಧ್ ಕೃಷ್ಣ ಅವರ ಬೌಲಿಂಗ್‌ನಲ್ಲಿ ರನ್ ಗಳಿಸಲು ನ್ಯೂಜಿಲೆಂಡ್ ಬ್ಯಾಟ್ಸ್‌ಮನ್‌ಗಳು ತಿಣುಕಾಡಿದರು. ಎರಡನೇ ದಿನದಾಟದ ಅಂತ್ಯಕ್ಕೆ ಕಿವೀಸ್ ತಂಡವು ಕೇವಲ 36 ರನ್‌ಗಳಿಗೆ ಪ್ರಮುಖ 2 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿದೆ. ದಿನದಾಟದ ಮುಕ್ತಾಯದ ವೇಳೆಗೆ ಡೀನ್ ಫಾಕ್ಸ್‌ಕ್ರಾಫ್ಟ್ (10) ಮತ್ತು ಜಾಕ್ ಗಿಬ್ಸನ್ (1) ಕ್ರೀಸ್‌ನಲ್ಲಿದ್ದು, ಇನ್ನೂ 428 ರನ್‌ಗಳ ಹಿನ್ನಡೆಯಲ್ಲಿದ್ದಾರೆ.

ಸರಣಿಯ ಮೊದಲ ಎರಡು ಪಂದ್ಯಗಳು ಡ್ರಾನಲ್ಲಿ ಅಂತ್ಯಗೊಂಡಿದ್ದವು, ಆದರೆ ಪ್ರಸ್ತುತ ನಡೆಯುತ್ತಿರುವ ಈ ಅಂತಿಮ ಪಂದ್ಯದಲ್ಲಿ ಭಾರತ 'ಎ' ತಂಡದ ಉತ್ತಮ ಪ್ರದರ್ಶನವು ಕ್ರೀಡಾಭಿಮಾನಿಗಳಲ್ಲಿ ಗೆಲುವಿನ ಭರವಸೆ ಮೂಡಿಸಿದೆ.





ಆಕರ್ಷಕ ಅರ್ಧ ಶತಕ ಸಿಡಿಸಿದ ತಿಲಕ್ ವರ್ಮಾ, ಧ್ರುವ್ ಜುರೆಲ್ ಮತ್ತು ವಾಷಿಂಗ್ಟನ್ ಸುಂದರ್.

ಸಂಕ್ಷಿಪ್ತ ಸ್ಕೋರ್

ಭಾರತ ಎ: ಮೊದಲ ಇನಿಂಗ್ಸ್ 146 ಓವರ್‌ಗಳಲ್ಲಿ 5 ವಿಕೆಟ್‌ಗೆ 464 (ತಿಲಕ್ ವರ್ಮಾ 81, ವಾಷಿಂಗ್ಟನ್ ಸುಂದರ್ 50; ಜಾಕ್ ಗಿಬ್ಸನ್ 73ಕ್ಕೆ 2, ಡಾನ್ರು ಫರ್ನ್ಸ್ 20ಕ್ಕೆ 1)
ನ್ಯೂಜಿಲೆಂಡ್ ಎ: 14 ಓವರ್‌ಗಳಲ್ಲಿ 2 ವಿಕೆಟ್‌ಗೆ 36 (ಕರ್ಟಿಸ್ ಹೇಫಿ 19, ಡೀನ್ ಫಾಕ್ಸ್‌ಕ್ರಾಫ್ಟ್ 10; ಪ್ರಸಿದ್ಧ್ ಕೃಷ್ಣ 12ಕ್ಕೆ 2)



ಕಿವೀಸ್ ಆರಂಭಿಕರ ವಿಕೆಟ್ ಕೆಡವಿದ ಪ್ರಸಿದ್ಧ್ ಕೃಷ್ಣ

ಪಾಕಿಸ್ತಾನ ವಿರುದ್ಧ ಭಾರತಕ್ಕೆ ಸೋಲು

ಅಂಡರ್19 ಏಷ್ಯಾ ಕಪ್

ಅರ್ಜುನ್ ರಜಪೂತ್ ಏಕಾಂಗಿ ಹೋರಾಟ ವ್ಯರ್ಥ

ಅಲ್ ಅಮೆರಾತ್ (ಒಮಾನ್): ಅಂಡರ್19 ಏಷ್ಯಾ ಕಪ್‌ನ ಗ್ರೂಪ್ 'ಎ' ಪಂದ್ಯದಲ್ಲಿ ಭಾರತ ತಂಡ ಪಾಕಿಸ್ತಾನ ವಿರುದ್ಧ 3 ವಿಕೆಟ್‌ಗಳ ಸೋಲು ಕಂಡಿದೆ. ಅರ್ಜುನ್ ರಜಪೂತ್ ಅವರ ದಿಟ್ಟ ಶತಕದ ಹೊರತಾಗಿಯೂ, ಪಾಕಿಸ್ತಾನವು ಹಮ್ಜಾ ಜಹೂರ್ ಅವರ ಅಜೇಯ ಶತಕದ ಬಲದಿಂದ ಗೆಲುವಿನ ನಗೆ ಬೀರಿತು.

ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಕೇವಲ 42 ರನ್‌ಗಳಿಗೆ ಪ್ರಮುಖ 4 ವಿಕೆಟ್‌ಗಳನ್ನು ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿತು. ನಾಯಕ ಲಕ್ಷ್ಯ ರಾಯ್ ಚಂದಾನಿ, ಆರ್ಯವೀರ್ ಸೆಹ್ವಾಗ್ (22), ವಿ.ಕೆ. ವಿನೀತ್ ಮತ್ತು ಯಶ್ ವರ್ಧನ್ ಚೌಹಾಣ್ ಬೇಗನೆ ಪೆವಿಲಿಯನ್ ಸೇರಿದರು. ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಅರ್ಜುನ್ ರಜಪೂತ್ ಅತ್ಯುತ್ತಮ ಆಟವಾಡಿ ಪ್ರತಿರೋಧ ತೋರಿದರು. ರಾಹುಲ್ ದ್ರಾವಿಡ್ ಪುತ್ರ ವಿಕೆಟ್‌ಕೀಪರ್ ಅನ್ವಯ್ ದ್ರಾವಿಡ್ (10) ಜೊತೆ 44 ರನ್‌ಗಳ ಹಾಗೂ ಚೌಹಾಣ್ (11) ಜೊತೆ 64 ರನ್‌ಗಳ ಜೊತೆಯಾಟ ನೀಡಿ ತಂಡಕ್ಕೆ ಆಸರೆಯಾದರು. ಅಂತಿಮವಾಗಿ 107 ರನ್ ಗಳಿಸಿದ ರಜಪೂತ್ ಹೋರಾಟ ವ್ಯರ್ಥವಾಯಿತು. ಅಂತಿಮವಾಗಿ ಭಾರತ ತಂಡವು 46.3 ಓವರ್‌ಗಳಲ್ಲಿ 208 ರನ್‌ಗಳಿಗೆ ಆಲೌಟ್ ಆಯಿತು. ಪಾಕಿಸ್ತಾನ ಪರ ಅಲಿ ರಜಾ (37ಕ್ಕೆ 3), ರಿಜ್ವಾನುಲ್ಲಾ (24ಕ್ಕೆ 3) ಮತ್ತು ನಿಖಾಬ್ ಶಫೀಕ್ (42ಕ್ಕೆ 3) ತಲಾ ಮೂರು ವಿಕೆಟ್ ಪಡೆದು ಭಾರತದ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

209 ರನ್‌ಗಳ ಸಾಧಾರಣ ಗುರಿ ಬೆನ್ನಟ್ಟಿದ ಪಾಕಿಸ್ತಾನ ತಂಡವು ಎಡಗೈ ಸ್ಪಿನ್ನರ್ ಮನಲ್ ಚೌಹಾಣ್ (32ಕ್ಕೆ 3) ಅವರ ಮಾರಕ ದಾಳಿಗೆ ಸಿಲುಕಿ 61 ರನ್‌ಗಳಿಗೆ ಪ್ರಮುಖ 5 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ಹಂತದಲ್ಲಿ ಜೊತೆಗೂಡಿದ ಹಮ್ಜಾ ಜಹೂರ್ ಮತ್ತು ಹಸನೈನ್ ದಾರ್ (38) ತಂಡಕ್ಕೆ ಆಸರೆಯಾದರು. ಇವರಿಬ್ಬರ ಆರನೇ ವಿಕೆಟ್‌ನ 107 ರನ್‌ಗಳ ಅಮೂಲ್ಯ ಜೊತೆಯಾಟವು ಪಂದ್ಯದ ಗತಿಯನ್ನೇ ಬದಲಿಸಿತು. ಜಹೂರ್ ಜವಾಬ್ದಾರಿಯುತ ಹಾಗೂ ಆಕ್ರಮಣಕಾರಿ ಬ್ಯಾಟಿಂಗ್ ನಡೆಸಿ ಅಜೇಯ ಶತಕ ಸಿಡಿಸಿದರು. ದಾರ್ ಔಟಾದ ಬಳಿಕವೂ ಕ್ರೀಸ್ ಕಾಯ್ದುಕೊಂಡ ಜಹೂರ್, ಕಾವ್ಯ ಪಟೇಲ್ ಎಸೆತದಲ್ಲಿ ಬೌಂಡರಿ ಬಾರಿಸಿ ತಂಡಕ್ಕೆ ಗೆಲುವು ತಂದುಕೊಡುವುದರ ಜೊತೆಗೆ ತಮ್ಮ ಶತಕವನ್ನೂ ಪೂರ್ಣಗೊಳಿಸಿದರು.

ಈ ರೋಚಕ ಗೆಲುವಿನೊಂದಿಗೆ ಪಾಕಿಸ್ತಾನ ತಂಡವು ಆಡಿದ ಎರಡು ಪಂದ್ಯಗಳಿಂದ 4 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಭಾರತ ತಂಡವು ಎರಡು ಪಂದ್ಯಗಳಿಂದ 2 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.



ಸಂಕ್ಷಿಪ್ತ ಸ್ಕೋರ್

ಭಾರತ: 46.3 ಓವರ್‌ಗಳಲ್ಲಿ 208 (ಅರ್ಜುನ್ ರಜಪೂತ್ 107, ಕಾವ್ಯ ಪರೇಶ್ ಪಟೇಲ್ 23; ರಿಜ್ವಾನುಲ್ಲಾ 24ಕ್ಕೆ 3, ಅಲಿ ರಜಾ 37ಕ್ಕೆ 3)
ಪಾಕಿಸ್ತಾನ: 48.1 ಓವರ್‌ಗಳಲ್ಲಿ 7 ವಿಕೆಟ್‌ಗೆ 209 (ಹಮ್ಜಾ ಜಹೂರ್ 100, ಹಸನೈನ್ ದಾರ್ 38; ಮನಲ್ ಚೌಹಾಣ್ 32ಕ್ಕೆ 2, ಮೋಹಿತ್ ಉಲ್ವಾ 45ಕ್ಕೆ 2)

ಅಂಡರ್17 ಫುಟ್ಬಾಲ್ ಏಷ್ಯಾ ಕಪ್ ಕ್ವಾಲಿಫೈಯರ್ ವೇಳಾಪಟ್ಟಿ ಪ್ರಕಟ

ಹೊಸದಿಲ್ಲಿ: ಮುಂದಿನ ವರ್ಷ ಉಜ್ಬೇಕಿಸ್ತಾನದಲ್ಲಿ ನಡೆಯಲಿರುವ ಎಎಫ್‌ಸಿ ಅಂಡರ್17 ಏಷ್ಯಾ ಕಪ್ ಫುಟ್ಬಾಲ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳ ವೇಳಾಪಟ್ಟಿ ಪ್ರಕಟವಾಗಿದೆ. ನವೆಂಬರ್ 8ರಿಂದ ಆರಂಭವಾಗಲಿರುವ ಅರ್ಹತಾ ಸುತ್ತಿನ ಪಂದ್ಯಗಳು ಒಟ್ಟು 7 ದೇಶಗಳಲ್ಲಿ ನಡೆಯಲಿವೆ. ತುರ್ಕ್ ಮೆನಿಸ್ತಾನ್ ತಂಡವು ಅರ್ಹತಾ ಪಂದ್ಯಾವಳಿಯಿಂದ ಹಿಂದೆ ಸರಿದ ಕಾರಣ, 'ಎಫ್' ಗುಂಪಿನಲ್ಲಿ ಈಗ ನಾಲ್ಕು ತಂಡಗಳು ಮಾತ್ರ ಉಳಿದುಕೊಂಡಿವೆ. ಒಟ್ಟು 34 ತಂಡಗಳು ಅಂತಿಮ ಹಂತದ ಉಳಿದ ಏಳು ಸ್ಥಾನಗಳಿಗಾಗಿ ಭರ್ಜರಿ ಪೈಪೋಟಿ ನಡೆಸುತ್ತಿವೆ.

ವಿವಿಧ ಹಂತಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಕೆಲವು ರಾಷ್ಟ್ರಗಳು 2027ರ ಎಎಫ್‌ಸಿ ಅಂಡರ್17 ಏಷ್ಯಾ ಕಪ್‌ಗೆ ನೇರವಾಗಿ ಅರ್ಹತೆಯನ್ನು ಖಚಿತಪಡಿಸಿಕೊಂಡಿವೆ. ಆ ತಂಡಗಳ ಪಟ್ಟಿ ಹೀಗಿದೆ- ಉಜ್ಬೇಕಿಸ್ತಾನ, ಆಸ್ಟ್ರೇಲಿಯಾ, ಸೌದಿ ಅರೇಬಿಯಾ, ತಜಕಿಸ್ತಾನ, ಜಪಾನ್, ಚೀನಾ, ವಿಯೆಟ್ನಾಂ, ದಕ್ಷಿಣ ಕೊರಿಯಾ, ಕತಾರ್. ಅರ್ಹತಾ ಪಂದ್ಯಾವಳಿಯ ನೇರಪ್ರಸಾರವನ್ನು ಕ್ರೀಡಾಭಿಮಾನಿಗಳು ಎಎಫ್‌ಸಿ ಅಧಿಕೃತ ಯೂಟ್ಯೂಬ್ ಚಾನಲ್‌ನಲ್ಲಿ(ಆಯ್ದ ಪ್ರದೇಶಗಳಲ್ಲಿ) ನೋಡಬಹುದಾಗಿದೆ.



ಭಾರತದ ಪಂದ್ಯಗಳು

'ಇ' ಗುಂಪಿನಲ್ಲಿ ಸ್ಥಾನ ಪಡೆದಿರುವ ಭಾರತದ ಮೊದಲ ಪಂದ್ಯ ನ.11ರಂದು ನಡೆಯಲಿದ್ದು, ಎಲ್ಲಾ ಪಂದ್ಯಗಳು ಸಿಂಗಾಪುರದ ಕೌಲಾಲಂಪುರದಲ್ಲಿ ಆಯೋಜನೆಗೊಳ್ಳಲಿವೆ.

- ನ.11 vs ಸಿಂಗಾಪುರ ಸಂಜೆ 6.30
- ನ.14 vs ಗುವಾಮ್ ಮಧ್ಯಾಹ್ನ 1
- ನ.17 vs ಪ್ಯಾಲೆಸ್ತೀನ್ ಮಧ್ಯಾಹ್ನ 1.00
- ನ.20 vs ಮಲೇಷ್ಯಾ ಸಂಜೆ 6.30

ಹಾರ್ಸ್ ಪವರ್

ಹೈದರಾಬಾದ್ ರೇಸ್ ■ ಅಶ್ವ ಬಂಧು

ಉತ್ತಮ ಫಾರ್ಮ್‌ನಲ್ಲಿ ಆಯುಷ್ಮಾನ್

ಡಿ. ನೆಟ್ಟೊ ತರಬೇತಿಯಲ್ಲಿ ಪಳಗಿರುವ ಆಯುಷ್ಮಾನ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆ ಡೆಮೊಕ್ರಸಿ ಪ್ಲೇಟ್ ಮೊದಲನೇ ಡಿವಿಜನ್ ಗೆಲ್ಲುವ ಫೇವರೆಟ್ ಎನಿಸಿದೆ. ಮೊದಲನೇ ರೇಸ್ ಮಧ್ಯಾಹ್ನ 1.20ಕ್ಕೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಅಪ್ರಮೇಯ 1, , ಮ್ಯಾಟ್ಸ್‌ಫ್ಲೂಮ್ 2, ನಾರ್ದರ್ನ್ ಸ್ಕೈ 4
- 2ನೇ ರೇಸ್: ದುಬಾಯ್ ಟಚ್ 7, ಸ್ಟಾರ್ ಆಫ್ ಒಪೆರಾ 2, ಸರ್ಟಾನಿಟಿ 3
- 3ನೇ ರೇಸ್: ಓಜಾಸ್ ಮ್ಯಾಕ್ಸಿಮಸ್ 2, ಎನ್‌ಆರ್‌ಐ ಕ್ರಿಪ್ಟೋ ಪವರ್ 10, ಹೋಮ್ ರನ್ 5
- 4ನೇ ರೇಸ್: ಗ್ರಿಟ್ ಎನ್ ಗ್ರೇಸ್ 2, ಡಿಜಿಟಲ್ ಎಂಪ್ರೆಸ್ 1, ಗಚ್ಚನ್ ಮನಸ್ವಿನ್ 4
- 5ನೇ ರೇಸ್: ಪೊಯೆಬಸ್ 5, ಬೋದಿ 6, ಫಸ್ಟ್ ಕಿಸ್ 9
- 6ನೇ ರೇಸ್: ಆಯುಷ್ಮಾನ್ 5, ಎಕ್ಸ್‌ಕ್ಯಾಲಿಬರ್ ಬ್ಲ್ಯಾಕ್ 4, ಎಮರಾಲ್ಡ್ ಟಚ್ 2
- 7ನೇ ರೇಸ್: ಧನದೀಪ 4, ಅಶ್ವ ವಿವೇಗಮ್ 2, ಆಂಬೊಸೆಲಿ 9

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 3, 4, 5, 6, 7; 1ನೇ ಟ್ರಿಬಲ್: 2, 3, 4; 2ನೇ ಟ್ರಿಬಲ್: 5, 6, 7

ಅತ್ಯುತ್ತಮ ಬೆಟ್: ಅಪ್ರಮೇಯ

ವೈಷ್ಣವಿ-ಋತುಜಾ ಜೋಡಿಗೆ ರನ್ನರ್ಸ್‌ಅಪ್ ಗರಿ



ವಿಜೇತ ನೈಮಾ- ಸಿಮೋನಾ ಜೋಡಿ.



ವೈಷ್ಣವಿ ಅಡ್ಕರ್ ಮತ್ತು ಋತುಜಾ ಭೋಸ್ಲೆ

ಚೆನ್ನೈ ಓಪನ್

ಚೆನ್ನೈ: ಚೆನ್ನೈ ಓಪನ್ ಡಬ್ಲ್ಯೂಟಿಎ 250 ಟೆನಿಸ್ ಟೂರ್ನಿಯ ಮಹಿಳಾ ಡಬಲ್ಸ್‌ನಲ್ಲಿ ಭಾರತದ ವೈಷ್ಣವಿ ಅಡ್ಕರ್ ಮತ್ತು ಋತುಜಾ ಭೋಸ್ಲೆ ಜೋಡಿ ರನ್ನರ್‌ಅಪ್‌ಗೆ ತೃಪ್ತಿಪಟ್ಟುಕೊಂಡಿದೆ. ಭಾನುವಾರ ನಡೆದ ಫೈನಲ್‌ನಲ್ಲಿ ಭಾರತೀಯ ಜೋಡಿಯು ಸ್ವಿಟ್ಜರ್ಲೆಂಡ್‌ನ ನೈಮಾ ಕರಮೋಕೊ- ಸಿಮೋನಾ ವಾಲ್ಟರ್ಟ್ ಜೋಡಿ ವಿರುದ್ಧ 2-6, 0-6 ನೇರ ಸೆಟ್‌ಗಳಿಂದ ಪರಾಭವಗೊಂಡಿತು.

ಸ್ವಿಸ್ ಜೋಡಿಯ ಆಕ್ರಮಣಕಾರಿ ಆಟ ಹಾಗೂ ನಿಖರ ನೆಟ್‌ಪ್ಲೇ ಎದುರು ಭಾರತೀಯ ಆಟಗಾರ್ತಿಯರು ನಿರುತ್ತರರಾದರು. ಕರಮೋಕೊ ಅವರ ಚುರುಕಿನ ಆಟ ಮತ್ತು ವಾಲ್ಟರ್ಟ್ ಅವರ ಬೇಸ್‌ಲೈನ್ ಆಟವು ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ನೆರವಾಯಿತು. ಫೈನಲ್ ಸೋಲಿನ ಹೊರತಾಗಿಯೂ, ಡಬ್ಲ್ಯುಟಿಎ ಟೂರ್ ಮಟ್ಟದ ಪಂದ್ಯಾವಳಿಯಲ್ಲಿ ಫೈನಲ್ ತಲುಪಿದ ಮೊದಲ ಸಂಪೂರ್ಣ ಭಾರತೀಯ (ಆಲ್ ಇಂಡಿಯನ್) ಜೋಡಿ ಎಂಬ ಐತಿಹಾಸಿಕ ಸಾಧನೆಗೆ ಅಡ್ಕರ್ ಮತ್ತು ಭೋಸ್ಲೆ ಜೋಡಿ ಪಾತ್ರವಾಗಿದೆ.

ಸತತ 2ನೇ ಬಾರಿ ಮೆಸ್ಸಿಗೆ ಎಂಎಲ್ಎಸ್ ಗೋಲ್ಡನ್ ಬೂಟ್

ಮಯಾಮಿ(ಅಮೆರಿಕ): ಅರ್ಜೆಂಟೀನಾದ ಸ್ಟಾರ್ ಫುಟ್ಬಾಲ್ ಆಟಗಾರ ಲಯೋನೆಲ್ ಮೆಸ್ಸಿ ಮೇಜರ್ ಲೀಗ್ ಸಾಕರ್ ಇತಿಹಾಸದಲ್ಲಿ ಮತ್ತೊಂದು ಹೊಸ ದಾಖಲೆ ಬರೆದಿದ್ದಾರೆ. ಶನಿವಾರ ಮುಕ್ತಾಯಗೊಂಡ 2026ರ ಸಾಕರ್ ಋತುವಿನಲ್ಲಿ 'ಗೋಲ್ಡನ್ ಬೂಟ್' ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವ ಮೂಲಕ, ಎಂಎಲ್‌ಎಸ್ ಲೀಗ್‌ನಲ್ಲಿ ಸತತವಾಗಿ ಎರಡು ಬಾರಿ ಈ ಪ್ರಶಸ್ತಿ ಗೆದ್ದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆಗೆ ಮೆಸ್ಸಿ ಪಾತ್ರರಾಗಿದ್ದಾರೆ.

39 ವರ್ಷದ ನಾಯಕ ಮೆಸ್ಸಿ, ಈ ಸೀಸನ್‌ನಲ್ಲಿ ಆಡಿದ 31 ಪಂದ್ಯಗಳಲ್ಲಿ ಅಮೋಘ 26 ಗೋಲುಗಳನ್ನು ಸಿಡಿಸಿ ಅಗ್ರಸ್ಥಾನದಲ್ಲಿದ್ದಾರೆ. ಎಫ್‌ಸಿ ಡಲ್ಲಾಸ್ ತಂಡದ ಪೆಟಾರ್‌ಮುಸಾ (22 ಗೋಲುಗಳು) ಮತ್ತು ನ್ಯಾಶ್‌ವಿಲ್ಲೆ ಎಸ್‌ಸಿ ತಂಡದ ಸ್ಯಾಮ್ ಸುರಿಡ್ಜ್ (21 ಗೋಲುಗಳು) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿದ್ದಾರೆ. 2023ರಲ್ಲಿ ಮಯಾಮಿ ತಂಡಕ್ಕೆ ಸೇರಿದ ಮೆಸ್ಸಿ, ಕಳೆದ ಸೀಸನ್‌ನಲ್ಲಿ 29 ಗೋಲುಗಳನ್ನು ಗಳಿಸಿದ್ದಾರೆ. ಅಂತಾರಾಷ್ಟ್ರೀಯ ಫುಟ್ಬಾಲ್‌ಗೆ ನಿವೃತ್ತಿ ಘೋಷಿಸಿರುವ ಮೆಸ್ಸಿ, ಇಂಟರ್ ಮಯಾಮಿ ಕ್ಲಬ್‌ನೊಂದಿಗೆ 2028ರವರೆಗೆ ಒಪ್ಪಂದವನ್ನು ವಿಸ್ತರಿಸಿದ್ದಾರೆ.



ನೈಜೀರಿಯಾಗೆ ಫಿಫಾ ಅಂಡರ್17 ಮಹಿಳಾ ವಿಶ್ವಕಪ್

ಫುಟ್ಬಾಲ್: ನಾಲ್ಕು ಬಾರಿಯ ಫೈನಲಿಸ್ಟ್ ಜಪಾನ್ ವಿರುದ್ಧ 2-1 ಗೋಲುಗಳ ಜಯ

ರಬಾತ್(ಮೊರಾಕೊ): ಫಿಫಾ ಅಂಡರ್ 17 ಮಹಿಳಾ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಜಪಾನ್ ತಂಡವನ್ನು 2-1 ಗೋಲುಗಳಿಂದ ಮಣಿಸಿದ ನೈಜೀರಿಯಾ ತಂಡವು, ಇತಿಹಾಸದಲ್ಲೇ ಮೊದಲ ಬಾರಿಗೆ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಆಫ್ರಿಕಾ ಖಂಡಕ್ಕೆ ಇದು ಐತಿಹಾಸಿಕ ಕಿರೀಟವಾಗಿದೆ.

ಪಂದ್ಯದ 39ನೇ ನಿಮಿಷದಲ್ಲಿ ನೈಜೀರಿಯಾದ ಸ್ಟಾರ್‌ಆಟಗಾರ್ತಿ ಅವಾವು ಬಶೀರು ಮೊದಲ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ನಂತರ ದ್ವಿತೀಯಾರ್ಧದ ಆರಂಭದಲ್ಲೇ (47ನೇ ನಿಮಿಷ) ಒಲುಬುಬೆ ಉಮೆಜಿಯಾಕು ಮತ್ತೊಂದು ಗೋಲು ಬಾರಿಸಿ ತಂಡದ ಮುನ್ನಡೆಯನ್ನು ಹೆಚ್ಚಿಸಿದರು. ನಾಲ್ಕು ಬಾರಿಯ ಫೈನಲಿಸ್ಟ್ ಜಪಾನ್ ತಂಡವು 80ನೇ ನಿಮಿಷದಲ್ಲಿ ಒಂದು ಗೋಲು ಗಳಿಸಿ ತಿರುಗೇಟು ನೀಡಲು ಯತ್ನಿಸಿತಾದರೂ, ನೈಜೀರಿಯಾದ ಬಲವಾದ ರಕ್ಷಣಾ ಗೋಡೆಯನ್ನು ಮುರಿಯಲು ವಿಫಲವಾಯಿತು. ಪಂದ್ಯದ ಅಂತಿಮ ಹಂತದಲ್ಲಿ ಜಪಾನ್ ತೀವ್ರ ಒತ್ತಡ ಹೇರಿದರೂ, ನೈಜೀರಿಯಾ ಆಟಗಾರ್ತಿಯರು ದಿಟ್ಟ ಹೋರಾಟ ನಡೆಸಿ ಮುನ್ನಡೆ ಕಾಯ್ದುಕೊಂಡು ರೋಚಕ ಜಯ ಸಾಧಿಸಿದರು. 2022ರಲ್ಲಿ ಮೂರನೇ ಸ್ಥಾನ ಪಡೆದಿದ್ದ ನೈಜೀರಿಯಾ, ಈಗ ಚೊಚ್ಚಲ ಟ್ರೋಫಿ ಮುಡಿಗೇರಿಸಿಕೊಂಡಿದೆ.



ಡಬ್ಲ್ಯೂಟಿಎ ಫೈನಲ್ಸ್‌ನಿಂದ ಹಿಂದೆ ಸರಿದ ಎಲೆನಾ ರಿಬಾಕೀನಾ

ಇಂಡಿಯನ್‌ವೆಲ್ಸ್(ಅಮೆರಿಕ): ವಿಶ್ವದ ನಂ.1 ಟೆನಿಸ್ ಆಟಗಾರ್ತಿ ಎಲೆನಾ ರಿಬಾಕೀನಾ, ಆರೋಗ್ಯ ಸಮಸ್ಯೆಯಿಂದಾಗಿ ಡಬ್ಲ್ಯೂಟಿಎ ಫೈನಲ್ಸ್ ಟೂರ್ನಿಯಿಂದ ಅಧಿಕೃತವಾಗಿ ಹೊರಗುಳಿದಿದ್ದಾರೆ. ಇಂಡಿಯನ್ ವೆಲ್ಸ್‌ನಲ್ಲಿ ಈ ಮಹತ್ವದ ಚಾಂಪಿಯನ್‌ಶಿಪ್ ಆರಂಭಗೊಳ್ಳಲು ಕೆಲವೇ ದಿನಗಳಷ್ಟೇ ಬಾಕಿ ಇರುವಾಗ, ವೈದ್ಯಕೀಯ ಕಾರಣ ನೀಡಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ತಮ್ಮ ನಿರ್ಧಾರದ ಕುರಿತು ಮಾತನಾಡಿರುವ 27 ವರ್ಷದ ಕಜಕ್ ಆಟಗಾರ್ತಿ ರಿಬಾಕೀನಾ, ಸದ್ಯ ತಾವು ಪಂದ್ಯಾವಳಿಯಲ್ಲಿ ಆಡಲು ದೈಹಿಕವಾಗಿ ಸಿದ್ಧವಾಗಿಲ್ಲ ಎಂದು ತಿಳಿಸಿದ್ದಾರೆ. ಮುಂದಿನ 2027ರ ಋತುವಿನ ವೇಳೆಗೆ ವಿಶ್ರಾಂತಿ ಪಡೆದು ಸಂಪೂರ್ಣ ಚೇತರಿಸಿಕೊಳ್ಳುವುದಾಗಿ ಹೇಳಿದ್ದಾರೆ. ಕಳೆದ ವಾರ ಜಪಾನ್‌ನಲ್ಲಿ ನಡೆದ ಪ್ಯಾನ್ ಪೆಸಿಫಿಕ್ ಓಪನ್ ಟೂರ್ನಿ ವೇಳೆ ಕುತ್ತಿಗೆ ಗಾಯಕ್ಕೆ ಒಳಗಾದ ಕಾರಣ ರಿಬಾಕೀನಾ ಹಿಂದೆ ಸರಿದಿದ್ದರು.

ರಿಬಾಕೀನಾ ಗೈರುಹಾಜರಿಯಿಂದಾಗಿ, ಮೀಸಲು ಆಟಗಾರ್ತಿಯಾಗಿದ್ದ ಉಕ್ರೇನ್‌ನ ಮಾರ್ತಾ ಕೊಸ್ಟ್ಯುಕ್ ಮೇನ್ ಡ್ರಾ ಪ್ರವೇಶಿಸಿದ್ದಾರೆ. ಅವರು ಭಾನುವಾರ ನಡೆಯಲಿರುವ ಪಂದ್ಯದಲ್ಲಿ ವಿಂಬಲ್ಡನ್ ಚಾಂಪಿಯನ್ ಲಿಂಡಾ ನೊಸ್ಕೋವಾ ವಿರುದ್ಧ ಆಡಲಿದ್ದಾರೆ. ಈ ವರ್ಷ ಆಸ್ಟ್ರೇಲಿಯನ್ ಓಪನ್ ಮತ್ತು ಯುಎಸ್ ಓಪನ್ ಸೇರಿದಂತೆ ಒಟ್ಟು ನಾಲ್ಕು ಪ್ರಶಸ್ತಿಗಳನ್ನು ಗೆದ್ದಿರುವ ರಿಬಾಕೀನಾ ಉತ್ತಮ ಗೆಲುವಿನ ದಾಖಲೆ ಕಾಯ್ದುಕೊಂಡಿದ್ದಾರೆ.



Mukka Proteins Limited

ಮುಕ್ಕಾ ಪ್ರೋಟೀನ್ಸ್ ಲಿಮಿಟೆಡ್

ನೋಂದಾಯಿತ ಕಛೇರಿ: ಮುಕ್ಕಾ ಕಾರ್ಪೊರೇಟ್ ಹೌಸ್, ಡೋರ್ ನಂ. 18-2-16/4, ಮೊದಲನೇ ಕ್ರಾಸ್, ಎನ್ ಜಿ ರಸ್ತೆ, ಅತ್ತಾವರ, ದಕ್ಷಿಣ ಕನ್ನಡ, ಮಂಗಳೂರು-575001, ಕರ್ನಾಟಕ.
ದೂರವಾಣಿ: +918244252889 ಇಮೇಲ್: investors@mukkaproteins.com
ವೆಬ್‌ಸೈಟ್: www.mukkaproteins.com CIN: L10207KA2010PLC055771

ಸೆಪ್ಟೆಂಬರ್ 30, 2026ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿತವಲ್ಲದ ಕಂಪನಿಯ ಆರ್ಥಿಕ ಫಲಿತಾಂಶಗಳ ವಿವರಣೆ

ಲೆಕ್ಕಪರಿಶೋಧನಾ ಸಮಿತಿಯ ಶಿಫಾರಸಿನ ಆಧಾರದ ಮೇಲೆ, ಕಂಪನಿಯ ನಿರ್ದೇಶಕರ ಮಂಡಳಿಯು ನವೆಂಬರ್ 07, 2026 ರಂದು ನಡೆದ ಸಭೆಯಲ್ಲಿ, ಸೆಪ್ಟೆಂಬರ್ 30, 2026ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕಕ್ಕೆ ಕಂಪನಿಯ ಲೆಕ್ಕಪರಿಶೋಧನೆ ಮಾಡದ ಪ್ರತ್ಯೇಕ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಸಂಪೂರ್ಣ ಹಣಕಾಸು ಫಲಿತಾಂಶಗಳು ಅವುಗಳ ಮೇಲಿನ ಶಾಸನಬದ್ಧ ಲೆಕ್ಕಪರಿಶೋಧಕರ ಪರಿಶೀಲನಾ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ https://mukkaproteins.com/wp-content/uploads/2026/11/Outcome-of-Board-Meeting_Q2_final.pdf ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಅಥವಾ www.nseindia.com ಗೆ ಭೇಟಿ ನೀಡಬಹುದು ಮತ್ತು ಕೆಳಗಿನ ('QR') ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕವೂ ವೀಕ್ಷಿಸಬಹುದು.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಮುಕ್ಕಾ ಪ್ರೋಟೀನ್ಸ್ ಲಿಮಿಟೆಡ್
ಸಹಿ/-
ಕಲಂದನ್ ಮೊಹಮದ್ ಹ್ಯಾರಿಸ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಓ

ಸ್ಥಳ : ಮಂಗಳೂರು
ದಿನಾಂಕ : 07-11-2026

IN THE COURT OF THE SENIOR CIVIL JUDGE AND J.M.F.C. AT MOODABIDRI
G & W.C.No. 81/2026
Master. Muhammad Hilal
Represented by his mother as natural guardian
Mrs. Fathima Zohara ...Petitioner
AND
The Branch Manager,
Mangalore Catholic Co-Op., Bank Ltd., Moodbidri ...Respondent

PUBLIC NOTICE

Whereas the above-named petitioner has filed a petition under Sections 7 to 10 of the Guardians and Wards Act before this Court, seeking her appointment as guardian on behalf of her minor son, Muhammad Hilal, born on 12-10-2020, for the purpose of settling the gold loan, securing the release of the jewellery pledged with the Respondent Bank, and claiming the amount, if any, due in respect thereof in her name on behalf of the minor. The pledged jewellery is presently in the custody of the Respondent Bank. If anybody having any objection, they are hereby directed to appear before this Court on 25-11-2026 at 11.00 A.M. Otherwise, the court will pass appropriate orders in your absence.

Given under my hand and seal of this Court on this 3rd day of November 2026

(By order of the court)
Sd/- ***Chief Ministerial Officer,***
Senior Civil Judge & J.M.F.C.Court, Moodbidri, D.K.
Sd/- **ASHWEEJA M**
Advocate for the Petitioner

ಇರಾನ್ ಭೂಮಾರ್ಗ ನಿರ್ಬಂಧಕ್ಕೆ ಅಮೆರಿಕ ಪ್ಲ್ಯಾನ್

ವಾಷಿಂಗ್ಟನ್: ಇರಾನ್‌ಗೆ ಆಯುಧಗಳು, ಶಸ್ತ್ರಾಸ್ತ್ರಗಳು, ಅಕ್ರಮ ವಸ್ತುಗಳನ್ನು ಸಾಗಿಸಲು ಬಳಸಲಾಗುತ್ತಿರುವ ಭೂ ಮಾರ್ಗಗಳನ್ನು ಕಂಡುಹಿಡಿಯಲು 20 ಸದಸ್ಯರ ಕಾರ್ಯಪಡೆ ರಚಿಸುವುದಾಗಿ ಅಮೆರಿಕ ಮಿಲಿಟರಿ ಭಾನುವಾರ ಘೋಷಿಸಿದೆ.

''ಹೊಸದಾಗಿ ರಚಿಸಲಾಗುವ ಕಾರ್ಯಪಡೆ ಇರಾನ್‌ಗೆ ಹಣಕಾಸು ನೆರವು ಒದಗಿಸುವ, ಶಸ್ತ್ರಾಸ್ತ್ರ ಕಾರ್ಖಾನೆಗಳನ್ನು ಪುನರ್ ನಿರ್ಮಿಸುವ ಹಾಗೂ ಸೈನ್ಯದ ಸಾಮರ್ಥ್ಯವನ್ನು ವೃದ್ಧಿಸುವ ಚಟುವಟಿಕೆಗಳನ್ನು ನಿರ್ಬಂಧಿಸಲಿದೆ.'' ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಬ್ರಾಡ್ ಕೂಪರ್ ಹೇಳಿದ್ದಾರೆ.

''ನಾಗರಿಕ ಮತ್ತು ಮಿಲಿಟರಿ ಸಿಬ್ಬಂದಿಯನ್ನು ಒಳಗೊಂಡಿರುವ ಕಾರ್ಯಪಡೆ ತಂಡವು ಇರಾನ್‌ನ ಭೂ ಗಡಿಗಳು ಮತ್ತು ಕ್ಯಾಸ್ಪಿಯನ್ ಸಮುದ್ರದ ಮೂಲಕ ಸಾಗಿಸುವ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಗಳು, ದ್ವಿ-ಬಳಕೆಯ ತಂತ್ರಜ್ಞಾನಗಳು, ನಿರ್ಬಂಧಿತ ಸಾಮಗ್ರಿಗಳು ಮತ್ತು ಅಕ್ರಮ ಆದಾಯ ಮೂಲಗಳ ಸಾಗಣೆಯನ್ನು ತಡೆಯುವ ಕೆಲಸ ಮಾಡಲಿದೆ,'' ಎಂದು ಸೆಂಟ್ರಲ್ ಕಮಾಂಡ್ ತಿಳಿಸಿದೆ. ಎರಡು ದೇಶಗಳ ನಡುವೆ ಕಳೆದ ಎಂಟು ತಿಂಗಳಿಂದ ನಡೆಯುತ್ತಿರುವ ಯುದ್ಧದ ನಡುವೆ ಇರಾನಿಯನ್ ಬಂದರುಗಳ ಮೇಲೆ ಅಮೆರಿಕದ ನೌಕಾ ದಿಗ್ಬಂಧನ ವಿಧಿಸಿದೆ. ಹೊಸ ಕಾರ್ಯಪಡೆ ಭೂಮಾರ್ಗಗಳು, ಜಲಮಾರ್ಗಗಳ ಮೂಲಕ ಇರಾನ್‌ಗೆ ಸಾಗಣೆಯಾಗುವ ಸರಕುಗಳ (ಮುಖ್ಯವಾಗಿ ಶಸ್ತ್ರಾಸ್ತ್ರ ಮದ್ದುಗುಂಡುಗಳು) ಮೇಲೆ ನಿರ್ಬಂಧಗಳನ್ನು ವಿಸ್ತರಿಸಲಿದೆ. ಸಂಘರ್ಷದ ಸಂದರ್ಭದಲ್ಲಿ ನಿರ್ಣಾಯಕ ಹರ್ಮುಜ್ ಜಲಸಂಧಿ ವ್ಯಾಪಾರ ಮಾರ್ಗದ ಮೇಲೆ ಟೆಹರಾನ್ ನಿರ್ಬಂಧ ವಿಧಿಸಿದ್ದು, ಜಾಗತಿಕ ಇಂಧನ ಪೂರೈಕೆಗೆ ಅಡ್ಡಿಪಡಿಸಿದೆ.

ಶೇಖ್ ಹಸೀನಾ ಹಸ್ತಾಂತರಕ್ಕೆ ಮತ್ತೆ ಬಾಂಗ್ಲಾದೇಶ ಮನವಿ

ಢಾಕಾ: ''ಪದಚ್ಯುತ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಕ್ರಿಮಿನಲ್ ಪ್ರಕರಣದಲ್ಲಿ ಅಪರಾಧ ಸಾಬೀತಾದ ಘೋಷಿತ ಅಪರಾಧಿ,'' ಎಂದು ಪುನರುಚ್ಚರಿಸಿರುವ ಬಾಂಗ್ಲಾದೇಶ ಕಾನೂನು ಸಚಿವ ಎಂ.ಡಿ. ಅಸದುಜ್ಜಮಾನ್, ''ಮಾಜಿ ಪ್ರಧಾನಿಯನ್ನು ದೇಶಕ್ಕೆ ಹಸ್ತಾಂತರಿಸುವಂತೆ ಭಾರತವನ್ನು ಕೋರಲಾಗಿದೆ,'' ಎಂದು ತಿಳಿಸಿದ್ದಾರೆ.

ಢಾಕಾದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ''ಶೇಖ್ ಹಸೀನಾ ಅವರನ್ನು ಭಾರತದಿಂದ ಮರಳಿ ಕರೆತರಲು ಅಗತ್ಯವಿರುವ ಕಾನೂನು ಕ್ರಮಗಳನ್ನು ನಮ್ಮ ಸರಕಾರ ಕೈಗೊಳ್ಳುತ್ತಿದೆ. ನಿಗದಿತ ಕಾನೂನು ಪ್ರಕ್ರಿಯೆಯಂತೆ ಎಲ್ಲವೂ ನಡೆಯಲಿದೆ,'' ಎಂದು ಹೇಳಿದರು. ''ನನ್ನ ದೃಷ್ಟಿಯಲ್ಲಿ ಅವರು (ಹಸೀನಾ) ಒಬ್ಬ ಅಪರಾಧಿ. ದೇಶದ ನ್ಯಾಯಮಂಡಳಿ ಹಸೀನಾ ಅಪರಾಧಿ ಎಂಬುದಾಗಿ ತೀರ್ಪು ನೀಡಿದೆ. ದೇಶದ ಜನರ ಪಾಲಿಗೆ ಅವರೊಬ್ಬ ಘೋಷಿತ ಅಪರಾಧಿ, ಇದೇ ಅವರ ಗುರುತು. ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಮರಳಿ ಕರೆತರುವ ಪ್ರಕ್ರಿಯೆ ಕಾನೂನಿಗೆ ಅನುಗುಣವಾಗಿ ನಡೆಯಲಿದೆಯೇ ಹೊರತು ಭಾವನೆಗಳ ಆಧಾರದ ಮೇಲೆ ಅಲ್ಲ,'' ಎಂದು ಅಸದುಜ್ಜಮಾನ್ ಹೇಳಿದ್ದಾರೆ.

''ಉಭಯ ದೇಶಗಳ ನಡುವಿನ ಹಸ್ತಾಂತರ ಒಪ್ಪಂದದ ಅಡಿಯಲ್ಲಿ ಹಸೀನಾ ಅವರನ್ನು ಒಪ್ಪಿಸುವಂತೆ ಭಾರತಕ್ಕೆ ಮನವಿ ಮಾಡಲಾಗಿದೆ. ಹಸೀನಾ ಅವರನ್ನು ಹಸ್ತಾಂತರಿಸಿದರೆ ದೇಶದ ಕಾನೂನಿಗೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು,'' ಎಂದು ಸಚಿವರು ಹೇಳಿದ್ದಾರೆ. ವಿದ್ಯಾರ್ಥಿಗಳು 2024ರಲ್ಲಿ ಸರಕಾರದ ವಿರುದ್ಧ ಹೋರಾಟ ನಡೆಸಿದ ವೇಳೆ ಮಾನವೀಯತೆಯ ವಿರುದ್ಧದ ಅಪರಾಧಗಳನ್ನು ಎಸಗಿದ ಆಪಾದನೆ ಮೇಲೆ ಹಸೀನಾ ಅವರನ್ನು 'ಅಪರಾಧಗಳ ನ್ಯಾಯಮಂಡಳಿ' 2025ರ ನವೆಂಬರ್‌ನಲ್ಲಿ ದೋಷಿಯಾಗಿ ಘೋಷಿಸಿತ್ತು.